ಶ್ರೀ ವೀರೇಂದ್ರಪಾಟೀಲ್.—ಈಗ 19 ಮೈಲು ಉದ್ದದ ರೋಡನ್ನು ತೆಗೆದುಕೊಳ್ಳುತ್ತೇವೆಂದು ಭರವಸೆ ಕೊಟ್ಟಿಲ್ಲ. ತೆಗೆದುಕೊಳ್ಳುವ ಪ್ರಯತ್ನ ಮಾಡುತ್ತೇನೆಂದು ಹೇಳಿದ್ದೇನೆ. ಬಹಳ ದಿವಸಗಳಿಂದ ಈ ರೋಡು ಹಾಗೆಯೆ ನಿಂತಿದೆ ಎನ್ನುವುದು ಗೊತ್ತಿದೆ. ಮಾನ್ಯ ಸದಸ್ಯರು ಹೇಳಿದ ಕೆಲವು ಸಣ್ಣ ಪುಟ್ಟ ರೋಡನ್ನು ತೆಗೆದುಕೊಂಡಿದ್ದೇವೆ. ಮತ್ತು ಸ್ವಲ್ಪಮಟ್ಟಿನವರಿಗೆ ತೃಪ್ತಿ ಆಗುವಂತೆ ಪ್ರಯತ್ನ ಮಾಡಿದ್ದೇವೆ. 19 ಮೈಲು ರೋಡ್ ಇರುವುದರಿಂದ ಕಷ್ಟವಾಗಿದೆ ಈವರ್ಷದ ರೂರಲ್ ಕಮ್ಯೂನಿಕೇಷನ್ ಪ್ರಾಪಿಷನ್‌ನಿಂದ ಇದಕ್ಕಾಗಿ ಖರ್ಚು ಮಾಡಿ ಎಂದರೆ ಅಷ್ಟು ದುಡ್ಡು ಖರ್ಚು ಮಾಡಲಕ್ಕೆ ಆಗಲಿಕ್ಕಿಲ್ಲ. ಸಿ. ಡಿ. ವರ್ಕ್ಸ್‌ಗೆ 2 ಲಕ್ಷ ಆಗುತ್ತದೆ. ದುಡ್ಡು ಏನಾದರೂ ಉಳಿದರೆ, ಇದಕ್ಕೆ ಖರ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

Relief Works in Magadi Taluk

*Q.—73. Sri C. R. RANGE GOWDA (Magadi).—

Will the Minister for Revenue and Forests be pleased to state :—

(*a*) the relief works listed out and sactioned under 64 Famine Relief measures in Magadi Taluk for the last one year (Hobliwise figures to be furnished) ;

(*b*) the amount sanctioned and actually spent on each one of those works ;

(*c*) the authority to check the work done ?

*A.—Sri G. B. SHANKAR RAO (Depuy Minister for Revenue):—

(*a*) Following are the 142 relief works executed in Magadi Taluk:-

	Name of Hobli	*No. of relief works*
1	Magadi Kasaba	25
2	Thippasandra	14
3	Mudabal	33
4	Solur	23
5	Kudur	25
6	Tavarekere	22
	Total	142

for details *Vide* Appendix 'A' placed on the Table of the House.**

(*b*) *Vide* Appendix 'B' placed on the Table of the House.**

(*c*) The Tahsildar of Magadi Taluk.

** Copies placed in the Mysore Legislature Library. *Vide* Number 7 dated 30th June 1967.

12-30 P.M.

ಶ್ರೀ ಸಿ. ಆರ್ ರಂಗೇಗೌಡ.—ಸ್ವಾಮಿ ಮಾಗಡಿ ತಾಲ್ಲೂಕಿನಲ್ಲಿ ಪರಿಹಾರ ಕಾಮಗಾರಿಗಳನ್ನು ಮಾಡಿ ಹಣ ಕೊಡುವಾಗ ಅದನ್ನು ನಾಮಿನಲ್ ರೋಲುಗಳ ಮೇಲೆ ಕೊಟ್ಟಿದ್ದೀರೋ, ಅಥವ ಅಳತೆ ಮಾಡಿ ಅದರ ಮೇಲೆ ಕೊಟ್ಟಿದ್ದೀರೋ?

Sri G. B. SHANKAR RAO.—In executing these famine relief works, the rates that are applicable to the estimates of the regular P. W. D. are not applicable.

ಶ್ರೀ ಸಿ. ಆರ್. ರಂಗೇಗೌಡ.—ಪಿ. ಡಬ್ಲ್ಯು. ಇಲಾಖೆಯವರ ಅದಕ್ಕೆ ತಲೆಯನ್ನೇ ಹಾಕಿಲ್ಲ. ಅವರು ಕೆಲಸಕ್ಕೇನೇ ಬಂದಿಲ್ಲ. ಆದ್ದರಿಂದ ನೀವು ಯಾವ ಆಧಾರದ ಮೇಲೆ ಕೊಟ್ಟಿದ್ದೀರಿ ?

ಶ್ರೀ ಜಿ. ಬಿ. ಶಂಕರ್ ರಾವ್.—ಅದಕ್ಕೆ ಫ್ಯಾಮಿನ್ ಕೋಡಿನಲ್ಲಿ ರೂಲ್ಸ್ ಇದೆ. ಆ ಪ್ರಕಾರ ಕೊಟ್ಟಿದ್ದಾರೆ.

ಶ್ರೀ ಸಿ. ಆರ್. ರಂಗೇಗೌಡ.—ತಾವು ಲೆಕ್ಕ ಕೊಟ್ಟಿದ್ದೀರಿ ಎರಡು ಸಾವಿರ ಎಂದು ಅಷ್ಟೇ ಖರ್ಚು ಮಾಡಿದ್ದೀರಿ. ಇದು ಯಾವುದರ ಮೇಲೆ ಕೊಟ್ಟಿದ್ದೀರಿ?

ಶ್ರೀ ಜಿ. ಬಿ. ಶಂಕರ್ ರಾವ್.—ಇಂಥ ಕೇಸ್‌ಗಳಲ್ಲಿ ಏನು ರೇಟ್ಸ್ ಕೊಡಬೇಕೆಂದು ರೂಲ್ಸ್ ಇದೆ, ಅದರ ಪ್ರಕಾರ ಕೊಟ್ಟಿದ್ದೇವೆ.

ಶ್ರೀ ಸಿ. ಆರ್. ರಂಗೇಗೌಡ.—ಕೆಲಸಮಾಡಿಸುವಾಗ ಮುಂಜೂರು ಮಾಡಿರುವುದು ಎರಡು ಸಾವಿರ ಖರ್ಚು ಮಾಡಿರುವುದು ಎರಡು ಸಾವಿರ. ಇವರು ಏನು ಟೇಪು ಇಟ್ಟುಕೊಂಡು ಮಣ್ಣನ್ನು ಅಳತೆ ಮಾಡಿದ್ದಾರೆಯೇ ?

ಶ್ರೀ ಜಿ. ಬಿ. ಶಂಕರ್ ರಾವ್.—ಕೆಲಸ ಎಷ್ಟು ಆಗಿದೆ, ಅಷ್ಟಕ್ಕೆ ಸರಿಯಾಗಿ ಕೊಟ್ಟಿದೆ.

ಶ್ರೀ ಸಿ. ಆರ್. ರಂಗೇಗೌಡ.—ಮಾಗಡಿ ತಾಲ್ಲೂಕಿನಲ್ಲಿ ಕೊಟ್ಟಿರುವ ಹಣದಲ್ಲಿ ಬೇಕಾದಷ್ಟು ದುರುಪಯೋಗವಾಗಿದೆ, ಅಲ್ಲಿ ಭ್ರಷ್ಟಾಚಾರವಾಗಿದೆ, ಹಣ ಸರಿಯಾಗಿ ಉಪಯೋಗ ಮಾಡಿಲ್ಲ ಎಂಬುದರ ಬಗ್ಗೆ ಸರ್ಕಾರಕ್ಕೆ ಹಾಗೂ ವಿಜಿಲೆನ್ಸ್ ಕಮಿಶನರಿಗೆ ಕಾಗದ ಬರೆದಿದೆ. ಇದರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಜಿ. ಬಿ. ಶಂಕರ್ ರಾವ್.—ವಿಜಿಲೆನ್ಸ್ ಕಮಿಶನರಿಗೆ ಕಾಗದ ಬರೆದರೆ ಅವರು ಕ್ರಮ ತೆಗೆದುಕೊಳ್ಳುತ್ತಾರೆ. ಸರ್ಕಾರಕ್ಕೆ ಅಂಥದ್ದು ಏನು ಬಂದಿದೆಯೋ ಗೊತ್ತಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ರಿಲೀಫ್ ಕೆಲಸಗಳಲ್ಲಿ ಬಹಳ ಹಣ ದುರುಪಯೋಗವಾಗಿದೆ ಎಂದು ಕಂಡು ಬಂದಿರುವುದರಿಂದ ಅದನ್ನು ಪರಿಣತರಾದ ಅಸಿಸ್ಟೆಂಟ್ ಇಂಜಿನಿಯರ್‌ರವರಿಗೆ ಚೆಕ್ ಮೆಜರ್‌ಮೆಂಟ್ ಮಾಡಲು ಕೊಟ್ಟು ಅವರು ಒಪ್ಪಿಗೆ ಕೊಟ್ಟ ಮೇಲೆ ಇದನ್ನು ಮಾಡುವುದು ಯೋಗ್ಯವಲ್ಲವೇ?

ಶ್ರೀ ಜಿ. ಬಿ. ಶಂಕರ್ ರಾವ್.—ರೆವಿನ್ಯೂ ಇಲಾಖೆಯವರ ಪರವಾಗಿ ಪಿ. ಡ. ಬ್ಲೂ ಇಲಾಖೆಯವರೇ ಕಾಮಗಾರಿಗಳನ್ನು ಮಾಡಿಸುತ್ತಾರೆ. ಮಾಡಿಸಿದ ಕೆಲಸಕ್ಕೆ ರೆವಿನ್ಯೂ ಇಲಾಖೆಯಿಂದ ಹಣ ಕೊಡರಾಗುತ್ತಿದೆ.

ಶ್ರೀ ಸಿ. ಆರ್. ರಂಗೇಗೌಡ.—ನಾನು ಸರ್ಕಾರಕ್ಕೆ ಕೊಟ್ಟ ಕಾಗದ ಪತ್ರಗಳ ಮೇಲೆ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಈಗಲಾದರೂ ಕಾಗದ ಬರೆಯುತ್ತೇನೆ. ಈ ಬಗ್ಗೆ ಸ್ಥಳೀಯ ಜನರನ್ನು ಇಟ್ಟುಕೊಂಡು ಯಾವ ಯಾವ ಕಾರ್ಯಕ್ರಮಗಳನ್ನು ಹಾಕಿ ಯಾವ ಯಾವುದಕ್ಕೆ ಹಣವನ್ನು ಸರಿಯಾಗಿ ಖರ್ಚು ಮಾಡಿದ್ದಾರೆಂದು ಸರಿಯಾದ ತನಿಖೆ ನಡೆಸುತ್ತೀರಾ ?

ಶ್ರೀ ಜಿ. ಬಿ. ಶಂಕರ್ ರಾವ್.—ಕಾಗದ ಬರೆಯಿರಿ, ಅಮೇಲೆ ನೋಡೋಣ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ರೆವಿನ್ಯೂ ಕೆಲಸಗಳು ಪಿ.ಡಬ್ಲ್ಯು.ಡಿ. ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದ್ದೀರಿ. ಇದನ್ನು ಪಿ. ಡಬ್ಲ್ಯು. ಡಿ. ಇಲಾಖೆಗೆ ಕೊಟ್ಟರೆ, ಅವರು ಸರಿಯಾಗಿ ಮಣ್ಣು ತೆಗೆಸಿ, ಬಂದೊಬಸ್ತು ಸರಿಯಾಗಿ ಮಾಡುತ್ತಾರೆ. ಅಚ್ಚುಕಟ್ಟು ಜಾಸ್ತಿಯಾಗುತ್ತದೆ. ಆದ್ದರಿಂದ ಪಿ. ಡಬ್ಲ್ಯು. ಡಿ. ಇಲಾಖೆಗೆ ಕೊಡುವುದು ನ್ಯಾಯವಲ್ಲವೇ ?

ಶ್ರೀ ಜಿ. ಬಿ. ಶಂಕರ ರಾವ್.—ಆ ಕೆಲಸವನ್ನು ಪಿ. ಡಬ್ಲ್ಯು. ಡಿ. ಇಲಾಖೆಯವರಿಗೆ ಮಾಡುವುದಕ್ಕಾಗುವುದಿಲ್ಲವೆಂದು ಆಗಲೇ ಹೇಳಿದೆ.

ಶ್ರೀ ಎಚ್. ಡಿ. ದೇವೇಗೌಡ.—ರಿಲೀಫ್ ವರ್ಕ್ಸ್ ಮಾಡಿರತಕ್ಕ ಕಾಲದಲ್ಲಿ ಕೆರೆಗಳನ್ನು ಪಿ. ಡಬ್ಲ್ಯು. ಡಿ. ಯವರು ಮಾಡುವುದು, ರಸ್ತೆಗಳನ್ನು ಪಂಚಾಯ್ತಿ, ತಾಲ್ಲೂಕು ಬೋರ್ಡು ಏಜೆನ್ಸಿ ಮಾಡತಕ್ಕದ್ದು ಎಂದು ಸರ್ಕಾರ ಒಂದು ಆದೇಶ ಕೊಟ್ಟು, ಇದುವರೆಗೆ ಎಲ್ಲಾ ತಾಲ್ಲೂಕುಗಳಲ್ಲಿ ಪಿ. ಡಬ್ಲ್ಯು. ಡಿ. ಯವರೇ ಮೈನರ್ ಇರಿಗೇಷನ್ ಕೆಲಸ ಮಾಡಿರತಕ್ಕದ್ದು ನಿಜವಲ್ಲವೇ? ಹಾಗಿದ್ದಲ್ಲಿ ಮಾಗಡಿಯಲ್ಲಿ ಪಿ. ಡಬ್ಲ್ಯು. ಡಿ. ಗೆ ಏಕೆ ಅವಕಾಶ ಕೊಡಲಿಲ್ಲ?

ಶ್ರೀ ಜಿ. ಬಿ. ಶಂಕರ ರಾವ್.—ಮೈನರ್ ಇರಿಗೇಷನ್ ಕೆಲಸ ನಾವು ಮಾಡಿಸುವುದಿಲ್ಲ. ಕೆಲಸ ಮಾಡಿಸಿದ್ದಕ್ಕೆ ದುಡ್ಡು ಮಾತ್ರ ನಾವು ಕೊಡುತ್ತೇವೆ.

Sri H. SIDDAVEERAPPA.—Perhaps the Minister is not aware of the import of this question. What is meant is, if the work that is sanctioned is Rs 2,000. exactly Rs. 2,000 has been drawn. Is it after drawing the money they have said that the estimate is Rs. 2,000. Or what is the the position? Is it within the knowledge or experience of the Minister that exactly to the last pie, the amount that is sanctioned will be spent? Does it not show that is a mere bogus figure?

Mr. SPEAKER.—Is it the amount that is sanctioned for the scheme or the scheme sanctioned for the amount?

Sri H. SIDDAVEERAPPA.—I want to know, for work A, if Rs. 2,000 has been sanctioned, only Rs. 2,000 has been spent. Does it not show it is a bogus figure?

ಶ್ರೀ ಜಿ. ಬಿ. ಶಂಕರ ರಾವ್.—ರಿಲೀಫ್ ವರ್ಕ್ಸ್‌ನ್ನು ದಿನಕೂಲಿ ಮೇಲೆ ಮಾಡಿಸುತ್ತಿದ್ದಾರೆ. ಕೆಲಸ ಎಷ್ಟು ಆಗುತ್ತದೋ ಅಷ್ಟು ಹಣವನ್ನು ಕೊಡುತ್ತೇವೆ. ಇಲ್ಲಿ ಕೊಟ್ಟಿರುವ ಸಂಖ್ಯೆ ಸರಿಯಾಗಿದೆ. It is not a bogus figure.

ಶ್ರೀ ಸಿದ್ದಯ್ಯ ಕಾಶೀಮಠ.—ರಿಲೀಫ್ ವರ್ಕ್ಸ್‌ನಲ್ಲಿ ಕೆಲಸ ಮಾಡುತ್ತಿರುವ ಕೆಲಸಗಾರರಿಗೆ ಬಹಳ ಕಡಿಮೆ ಕೂಲಿಯನ್ನು ಕೊಡುತ್ತಿರುವುದರಿಂದ, ಇನ್ನು ಮುಂದೆ ಹೆಚ್ಚು ಕೂಲಿ ಕೊಡುವಂತೆ ಪಿ. ಡಬ್ಲ್ಯು. ಡಿ. ಇಲಾಖೆಗೆ ಶಿಫಾರ್ಸ್ ಮಾಡುತ್ತೀರಾ?

ಶ್ರೀ ಜಿ. ಬಿ. ಶಂಕರರಾವ್.—ಫ್ಯಾಮಿನ್ ರಿಲೀಫ್ ವರ್ಕ್ಸ್ ಜನರಿಗೆ ಕೆಲಸ ಸಿಗಲಿ ಎಂದು. ಕೆಲಸ ಇರಲಿ ಇಲ್ಲದಿರಲಿ ಅವರಿಗೆ ಕೊಡಬೇಕಾಗುತ್ತದೆ. ಈ ಕಾರಣದಿಂದ ಕಡಿಮೆ ರೇಟ್ ಇಟ್ಟು ಕೊಂಡು ತಾತ್ಕಾಲಿಕವಾಗಿ ಅಭಾವವಿರುವವರೆಗೆ ಕೆಲಸ ಕೊಟ್ಟು ಕೂಲಿ ಒದಗಿಸಲಾಗುತ್ತದೆ. ಆದ್ದರಿಂದ ಅಟ್ರ್ಯಾಕ್ಟಿವ್ ರೇಟನ್ನು ರಿಲೀಫ್ ಕಾಮಗಾರಿಗಳಲ್ಲಿ ಕೊಡಲಾಗುವುದಿಲ್ಲ.

Sri H. SIDDAVEERAPPA.—Is it a fact that this matter has been reported to the Vigilance Commission?

Sri G. B. SHANKAR RAO.—That I don't know.

Sri H. SIDDAVEERAPPA.—Will the hon'ble Minister try to know now that the money has been misused and that is why a complaint has been lodged before the Vigilance Commission?

ಶ್ರೀ ಜಿ. ಬಿ. ಶಂಕರ ರಾವ್.—ವಿಜಿಲೆನ್ಸ್ ಕಮಿಷನ್‌ಗೆ ಏನಾದರೂ ಹಣ ದುರುಪಯೋಗ ವಾಗಿದೆಯೆಂದು ಕಂಪ್ಲೈಂಟ್ ಬಂದರೆ ಅವರು ವಿಚಾರ ಮಾಡುತ್ತಾರೆ. ಸರ್ಕಾರದವರಿಗೆ ಏನಾದರೂ ಕಂಪ್ಲೈಂಟ್ ಬಂದರೆ ಸರ್ಕಾರದವರು ವಿಚಾರ ಮಾಡುತ್ತಾರೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಎರಡು ಸಾವಿರ ರೂಪಾಯಿಗಳನ್ನು ಮುಂಜೂರು ಮಾಡಿ ಅದಕ್ಕೆ ಸರಿಯಾಗಿ ಕೆಲಸ ಮಾಡಿಸಿದ್ದೀರಿ. ಅಂದರೆ ಎರಡು ಸಾವಿರ ರೂಪಾಯಿಗಳಿಗೆ ಅಳತೆ ಸೃಷ್ಟಿ ಮಾಡಿ ಕೆಲಸ ಮಾಡಿಸಿದ್ದೀರಾ, ನನಗೆ ಅರ್ಥವಾಗುತ್ತಿಲ್ಲ?

(ಉತ್ತರವಿಲ್ಲ)

ಶ್ರೀ ನಾಗಪ್ಪ —ಪರಿಹಾರ ಕಾಮಗಾರಿಗಳನ್ನು ಮಾಡಿಸುವಾಗ ರಾಯಲ್ಟಿಯನ್ನು ವಸೂಲು ಮಾಡುತ್ತಿದ್ದಾರೆ. ಇದರಿಂದ ಕೆಲಸಗಾರರ ಕೂಲಿಗೆ ತೊಂದರೆ ಬರುವುದಿಲ್ಲವೆ?

ಶ್ರೀ ಜಿ. ಬಿ. ಶಂಕರ ರಾವ್.—ಸರ್ಕಾರಕ್ಕೆ ಸೇರಿದ ಕಲ್ಲು ಮಣ್ಣು ತೆಗೆದುಕೊಂಡು ಕೆಲಸ ಮಾಡಿಸಿದರೆ ರಾಯಲ್ಟಿ ಕೊಡಬೇಕಾಗುತ್ತದೆ.

ಶ್ರೀ ನಾಗಪ್ಪ.—ಫ್ಯಾಮಿನ್ ರಿಲೀಫ್ ಕಾಮಗಾರಿಯ ಬಗ್ಗೆ ರಾಯಲ್ಟಿ ವಸೂಲು ಮಾಡುವುದರಿಂದ ಕೆಲಸಗಾರರಿಗೆ ಕಡಿಮೆ ಸಂಬಳ ಬರುವುದಿಲ್ಲವೆ ?

ಶ್ರೀ ಜಿ. ಬಿ. ಶಂಕರರಾವ್.—ಸರ್ಕಾರದ ಮೆಟೀರಿಯಲ್‌ನ್ನು ಕಂಟ್ರಾಕ್ಟರ್ ಉಪಯೋಗಿಸಿಕೊಂಡರೆ ಅದರ ಖರ್ಚನ್ನು ಕಂಟ್ರಾಕ್ಟರ್ ಕೊಡಬೇಕಾಗುತ್ತದೆ. ಕೆಲಸಗಾರರ ಕೂಲಿಯ ಮೇಲೆ ಅದು ಬೀಳುವುದಿಲ್ಲ.

Famine Relief Works

*Q.—122. Sri H. C. LINGA REDDY (Malur).—

Will the Minister for Revenue and Forests be pleased to state :—

(*a*) the amount spent on Famine relief last year in the State ;

(*b*) the quantum of Central assistance made available ;

(*c*) whether any remissions in land revenue were given or collection of land revenue was suspended last year ;

(*d*) whether it is true that the Government have decided to collect the same during this year ?

A.—Sri G. B. SHANKAR RAO (Deputy Minister for Revenue).—

(*a*) The following figures of expenditure have been debited to the head '64 Famine Relief' during the year 1965-66 and 1966-67.

(i) Rs. 65,84,138-82 during the year 1965-66.

(ii) Rs. 1,76,37,701 has been spent up to the end of February 1967 during the year 1966-67. This figure is only provisional as the total expenditure for the year 1966-67 will be known only in the month of June 1967, after the expenditure statements are received by the Accountant General finally from the Treasuries and noted in the books of the Accountant General.

(*b*) Rs. one crore loan assistance during the year 1965-66.

(*c*) In pursuance of Notification No. RDF 51 TRM 65, dated 1st February 1966, the Deputy Commissioners of Districts concerned were competent to postpone the collection of land revenue to the next revenue year in respect of any local areas, on account of failure of crops in any tract owing to inadequate rainfall or other cause the landholder is not able to pay the Land Revenue.

So far as remission of land revenue for the year 1965-66 is concerned, proposals, if any, from the Divisional Commissioners are awaited.

(*d*) Yes, in view of satisfactory seasonal condition and good harvest of crops during the year 1966-67.